**ಕರ್ನಾಟಕ ಸರ್ಕಾರ**

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

**ಆಯುಕ್ತರವರ ಕಛೇರಿ, ಗ್ರಾ.ಕು.ನೀ.&.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,**

**ಬೆಂಗಳೂರು – 560 009. ☎ : 080-22240508 📠 : 22240509 ಈ-ಮೇಲ್: krwssd@gmail.com**

ಸಂ.ಗ್ರಾಅಪ/110/ಗ್ರಾಕುನೀನೈಇ/2017 ದಿನಾಂಕ: 19-03-2018

**ಇವರಿಗೆ**

ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ.&.ನೈ. ವಿಭಾಗಗಳು,
ರಾಜ್ಯದ ಎಲ್ಲಾ 31 ವಿಭಾಗ ಕಛೇರಿಗಳು.

ಮಾನ್ಯರೇ,

ವಿಷಯ:- 2017-18ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (NRDWP) ಅಡಿ ಬ್ಯಾಂಕ್‌ನಲ್ಲಿ ವರ್ಷಾಂತ್ಯದ ಬಿಲ್ಲುಗಳನ್ನು ಮಾರ್ಚ್ 31 ರಂದೇ ತೀರ್ಣಗೊಳಿಸಿ ಲೆಕ್ಕವನ್ನು ಮುಕ್ತಾಯಗೊಳಿಸುವ ಬಗ್ಗೆ.

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (NRDWP) ಅಡಿ 2017-18ನೇ ಸಾಲಿನ ವರ್ಷಾಂತ್ಯದ ಬಿಲ್ಲುಗಳನ್ನು ಬ್ಯಾಂಕ್‌ನಲ್ಲಿ ತೀರ್ಣಗೊಳಿಸುವ ಸಲುವಾಗಿ ದಿನಾಂಕ 31-03-2018 ರಂದು ಅಂತಿಮವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, NRDWP ಅಡಿ ವಿವಿಧ ಘಟಕವಾರು ಬಿಲ್ಲುಗಳನ್ನು ಬ್ಯಾಂಕ್‌ನಲ್ಲಿ ಸ್ವೀಕರಿಸಲು ದಿನಾಂಕ 23-03-2018 ಅಂತಿಮ ದಿನವಾಗಿರುತ್ತದೆ. ದಿನಾಂಕ 23-03-2018 ರವರೆಗೆ ಸ್ವೀಕರಿಸಿದ ಬಿಲ್ಲುಗಳನ್ನು ಘಟಕವಾರು ಅನುದಾನದ ಲಭ್ಯತೆಗನುಗುಣವಾಗಿ ಬ್ಯಾಂಕ್‌ನವರು ದಿನಾಂಕ 31-03-2018 ರವರೆಗೆ ಪಾವತಿಸತಕ್ಕದ್ದು. ಹಾಗೂ ಆಯಾಯ ಘಟಕವಾರು ಲಭ್ಯವಿರುವ ಅನುದಾನದ ಮಿತಿಯೊಳಗೆ ಆಯಾಯ ಘಟಕದಡಿ ಬರುವ ಬಿಲ್ಲುಗಳನ್ನು ಪಾವತಿಸತಕ್ಕದ್ದು. ಹಾಗೂ ಇತರೆ ಘಟಕದಡಿ ಪಾವತಿಯಾಗದಂತೆ ಕ್ರಮ ವಹಿಸತಕ್ಕದ್ದು. ವಿಶೇಷವಾಗಿ ಕೇಂದ್ರ ವಲಯದಡಿ ಬಿಡುಗಡೆಯಾದ ಅನುದಾನವನ್ನು ಶೇ.100 ಖರ್ಚು ಮಾಡಲು ಸಂಬಂಧಿಸಿದ ವಿಭಾಗದ ಕಾರ್ಯಪಾಲಕ ಅಭಿಯಂತರರು ಕ್ರಮ ವಹಿಸುವುದು ಹಾಗೂ 2017-18ನೇ ಸಾಲಿನಲ್ಲಿ ದಿನಾಂಕ 31-03-2018 ರವರೆಗೆ ಪಾವತಿಯಾದ ಸಂಬಂಧ ಜಿಲ್ಲಾವಾರು ಬ್ಯಾಂಕ್ ಪಾಸ್ ಶೀಟ್ ಅನ್ನು ಬ್ಯಾಂಕ್‌ನವರು ಸಂಬಂಧಿಸಿದ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ಲೆಕ್ಕ ಮರುಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ಕಳುಹಿಸಿಕೊಡತಕ್ಕದ್ದು. ಸಂಬಂಧಿಸಿದ ವಿಭಾಗದ ಕಾರ್ಯಪಾಲಕ ಅಭಿಯಂತರರು ಲೆಕ್ಕ ಮರುಹೊಂದಾಣಿಕೆಯಾದ ಕೂಡಲೇ IMIS ನಲ್ಲಿ ಇಂದೀಕರಿಸತಕ್ಕದ್ದು. ದಿನಾಂಕ 31-03-2018 ರಂದು 2017-18ನೇ ಸಾಲಿನ ಆರ್ಥಿಕ ವರ್ಷವನ್ನು ಅಂತ್ಯಗೊಳಿಸತಕ್ಕದ್ದು. ವಿಭಾಗವಾರು ದಿನಾಂಕ 31-03-2018 ಕ್ಕೆ ಬ್ಯಾಂಕ್ ಪ್ರಕಾರ ಆಗಿರುವ ಖರ್ಚು ಮತ್ತು IMIS ನಲ್ಲಿ ಇಂದೀಕರಿಸಿರುವ ಖರ್ಚು ತಾಳೆ ಹೊಂದತಕ್ಕದ್ದು. ಕೇಂದ್ರ ಸರ್ಕಾರ 2017-18ನೇ ಸಾಲಿನ ವೆಚ್ಚವನ್ನು IMIS ನಲ್ಲಿ ಇಂದೀಕರಿಸಲು ಏಪ್ರಿಲ್-2018 ರ ಅಂತ್ಯದವರೆಗೆ ಸಮಯಾವಕಾಶ ನೀಡುತ್ತದೆ. ಈ ನಿಟ್ಟಿನಲ್ಲಿ ಮಾರ್ಚ್ 31, 2018 ರವರೆಗೆ ಆದ ವೆಚ್ಚವನ್ನು ಮಾತ್ರ 2017-18ನೇ ಸಾಲಿಗೆ IMIS ನಲ್ಲಿ ಇಂದೀಕರಿಸತಕ್ಕದ್ದು. ಯಾವುದೇ ಕಾರಣಕ್ಕೂ IMIS ನಲ್ಲಿ ಏಪ್ರಿಲ್-2018 ರಿಂದ ಆಗುವ ವೆಚ್ಚವನ್ನು 2017-18ನೇ ಸಾಲಿಗೆ ಇಂದೀಕರಿಸತಕ್ಕದ್ದಲ್ಲ.

ತಮ್ಮ ವಿಶ್ವಾಸಿ,

19/03

ಮುಖ್ಯ ಲೆಕ್ಕಾಧಿಕಾರಿಗಳು
ಗ್ರಾ.ಕು.ನೀ & ನೈ ಇಲಾಖೆ, ಬೆಂಗಳೂರು.

**ಪ್ರತಿಯನ್ನು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:**

1. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
2. ಮುಖ್ಯ ಲೆಕ್ಕಾಧಿಕಾರಿಗಳು, ಜಿ.ಪಂ., ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತ್‌ಗಳು.
3. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
4. ಮ್ಯಾನೇಜರ್, ಕಾರ್ಪೋರೇಷನ್ ಬ್ಯಾಂಕ್, ಮಲ್ಲೇಶ್ವರ ಶಾಖೆ, ಸಂಪಿಗೆ ರಸ್ತೆ, ಬೆಂಗಳೂರು.